# ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -12
E-mail: commissioner.pue.@gmail.com *Ph: No. 23361857, 23361858* Fax-23361852

ಸಂಖ್ಯೆ: ಪಪೂಶಿಇ ಸಿಬ್ಬಂದಿ-3 ಎಎನ್ ಶೈಮಾನ 2016-17 ದಿನಾಂಕ: 22-11-2016

## ಜ್ಞಾಪನ

ವಿಷಯ: ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಣ ಕುರಿತು.

ಉಲ್ಲೇಖ: 1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 89 ಟಿಪಿಯು 2014 ದಿನಾಂಕ:15-06-2016.
2. ಏಕ ಕಡತ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಯುಯು/ಕಾಮಾನ 2014-15 ದಿನಾಂಕ: 05-08-2014
3. ಸರ್ಕಾರದ ಅಧಿಸೂಚನೆ: ಇಡಿ 136 ಟಿಪಿಯು 1999 ದಿ: 09-10-2006 ರನ್ವಯ ದಿನಾಂಕ: 07-07-2007 ರಿಂದ ಜಾರಿಯಾಗಿರುವ The Karnataka Pre-University Education (Academic, Registration, Administration and Grant-in-Aid etc) Rules 2006
4. ಈ ಕಚೇರಿ ಪತ್ರ ಸಂಖ್ಯೆ: ಪಪೂಶಿ/ಸಿಬ್ಬಂದಿ-3/ಎಎಸ್/2006/ನಿತಿ/16-17 ದಿನಾಂಕ: 23-05-2016

-*-

ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಣ ಸಂಬಂಧ ಉಲ್ಲೇಖ 1 ರ ಸರ್ಕಾರದ ಸುತ್ತೋಲೆಯಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು 2016-17 ನೇ ಸಾಲಿನವರೆಗೆ ತಾತ್ಕಾಲಿಕವಾಗಿ ಮಾನ್ಯತೆ ನವೀಕರಣಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಪರಿಶೀಲಿಸಿದೆ. ಸದರಿ ಕಾಲೇಜುಗಳಿಗೆ ಮಾನ್ಯತೆ ನವೀಕರಣದ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ಕಳುಹಿಸಲಾಗುವುದು. ನವೀಕರಣ ಪ್ರಸ್ತಾವನೆ ಸಲ್ಲಿಸಿದ್ದ ಕಾಲೇಜುಗಳ ಪೈಕಿ ಷರತ್ತುಗಳಿಗೊಳಪಟ್ಟು ಅನುಮೋದನೆಗೊಂಡ ಕಾಲೇಜುಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಷರತ್ತುಗಳು:

1. ಸಂಸ್ಥೆಯು ಕರ್ನಾಟಕ ಶಿಕ್ಷಣ ಕಾಯ್ದೆ ಅಡಿ ರಚಿತವಾಗಿರುವ ನಿಯಮಗಳನ್ವಯ ಸಕ್ಷಮ ಪ್ರಾಧಿಕಾರದಲ್ಲಿ ನೋಂದಣಿಯಾಗಿರಬೇಕು ಹಾಗೂ ಸಕ್ಷಮ ಪ್ರಾಧಿಕಾರವು ನೋಂದಣಿಯನ್ನು ಪ್ರಸಕ್ತ ಸಾಲಿನವರೆಗೆ ನವೀಕರಿಸಿರಬೇಕು.
2. ಟ್ರಸ್ಟ್ ಆಕ್ಟ್ ಅಡಿ ನೋಂದಣಿಯಾಗಿದ್ದಲ್ಲಿ ಪ್ರಸ್ತುತ ವರ್ಷದಲ್ಲಿ ನಿಯಮಗಳನ್ವಯ ಟ್ರಸ್ಟ್ ಅಸ್ತಿತ್ವದಲ್ಲಿರುತ್ತದೆ ಎಂಬ ಬಗ್ಗೆ ನೋಂದಣಾಧಿಕಾರಿಯವರಿಂದ ದೃಢೀಕರಣ ಪಡೆದಿರಬೇಕು.
3. ಕಾಲೇಜನ್ನು ಪ್ರಾರಂಭಿಸಲು ಮಂಜೂರಾತಿ / ಶೈಕ್ಷಣಿಕ ಅನುಮತಿ ನೀಡಿದ ಸಮಯದಲ್ಲಿ, ಸಂಸ್ಥೆಯು ಸೊಸೈಟಿ ಆಗಿದ್ದು, ನಂತರದಲ್ಲಿ ಟ್ರಸ್ಟ್ ಆಗಿ ಪರಿವರ್ತನೆಯಾಗಿದ್ದಲ್ಲಿ, ಪರಿವರ್ತನೆ ಮಾಡಿಕೊಳ್ಳಲು ಸರ್ಕಾರದಿಂದ ಅಧಿಕೃತ ಆದೇಶ ಪಡೆದುಕೊಂಡಿರಬೇಕು.
4. ಸಂಸ್ಥೆಯು ಮೊದಲಿಗೆ ಬಾಂಬೆ ಟ್ರಸ್ಟ್ ಆಕ್ಟ್ ಅಡಿ ನೋಂದಣಿಯಾಗಿದ್ದಲ್ಲಿ, ಪ್ರಸ್ತುತ ಜಾರಿಯಲ್ಲಿರುವ ನಿಯಮಗಳನ್ವಯ ಚಾಲ್ತಿಯಲ್ಲಿರುವ ಸಂಘಗಳ ಅಧಿನಿಯಮದಡಿ ಪುನರ್ ನೋಂದಣಿ ಮಾಡಿಸಿಕೊಂಡಿರಬೇಕು.
5. ಪ್ರತಿ ವರ್ಷ ಸಂಸ್ಥೆಯ ಮತ್ತು ಕಾಲೇಜಿನ ಲೆಕ್ಕಪತ್ರಗಳನ್ನು ಅಧಿಕೃತ ಆಡಿಟರ್‌ರವರಿಂದ ಆಡಿಟ್ ಮಾಡಿಸಿರಬೇಕು.
6. ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ವ್ಯಾಜ್ಯ / ದಾವೆಗಳು ಇರಬಾರದು. ಒಂದು ವೇಳೆ ವ್ಯಾಜ್ಯಗಳ ಬಗ್ಗೆ ಮಾನ್ಯ ನ್ಯಾಯಾಲಯಗಳಲ್ಲಿ ದಾವೆಗಳು ಬಾಕಿ ಇದ್ದಲ್ಲಿ, ಸದರಿ ದಾವೆಗಳ ಮೇಲೆ ಮಾನ್ಯ ನ್ಯಾಯಾಲಯಗಳು ನೀಡುವ ತೀರ್ಪಿಗೆ ಈ ಆದೇಶವು ಒಳಪಟ್ಟಿರುತ್ತದೆ.
7. ಸರ್ಕಾರದ ಮಂಜೂರಾತಿ ಆದೇಶದಲ್ಲಿ ನಮೂದಿಸಿರುವ ಸ್ಥಳದಲ್ಲೇ ಪದವಿ ಪೂರ್ವ ಕಾಲೇಜು ನಡೆಯುತ್ತಿರಬೇಕು. ಒಂದು ವೇಳೆ ಬೇರೆ ಸ್ಥಳಕ್ಕೆ ಸ್ಥಳಾಂತರಿಸಿಕೊಂಡಿದ್ದಲ್ಲಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದಿರಬೇಕು ಮತ್ತು ಇಲಾಖೆಯಿಂದ ನಿಯಮಾನುಸಾರ ಹೊಸದಾಗಿ ಶೈಕ್ಷಣಿಕ ಮಾನ್ಯತೆ ಪಡೆದಿರಬೇಕು.
8. ಈ ಹಿಂದೆ ಶೈಕ್ಷಣಿಕ ಅನುಮತಿ ಪಡೆದುಕೊಂಡು ನಿಯಮಾನುಸಾರ ಪ್ರಸ್ತುತ ಶೈಕ್ಷಣಿಕ ಸಾಲಿನವರೆಗೆ ಬೋಧನೆ ಮಾಡುತ್ತಿರುವ ಭಾಷಾ ವಿಷಯಗಳು, ಐಚ್ಛಿಕ ವಿಷಯಗಳು, ಸಂಯೋಜನೆಗಳು ಮತ್ತು ವಿಭಾಗಗಳಿಗೆ ಮಾತ್ರ ಈ ಶೈಕ್ಷಣಿಕ ಮಾನ್ಯತೆ ಅನ್ವಯಿಸುವುದು. ಇಲಾಖೆಯಿಂದ ಅನುಮತಿ ಪಡೆಯದೆ ಪ್ರಾರಂಭಿಸಿರುವ, ವಿಚ್ಛನ್ನತೆ ಇರುವ

ಹಾಗೂ ಬೋಧಿಸಲು ನಿಲ್ಲಿಸಿರುವ ಭಾಷಾ ವಿಷಯಗಳು, ಐಚ್ಛಿಕ ವಿಷಯಗಳು, ಸಂಯೋಜನೆಗಳು ಮತ್ತು ವಿಭಾಗಗಳಿಗೆ ಈ ಶೈಕ್ಷಣಿಕ ಮಾನ್ಯತೆ ಅನ್ವಯಿಸುವುದಿಲ್ಲ.

9. ಪದವಿ ಪೂರ್ವ ಕಾಲೇಜಿಗಾಗಿಯೇ ಪ್ರತ್ಯೇಕ ಸ್ವಂತ ಆಟದ ಮೈದಾನ ಇರಬೇಕು.
10. ಈ ಪದವಿ ಪೂರ್ವ ಕಾಲೇಜಿಗಾಗಿಯೇ ಕನಿಷ್ಠ 25000 ಚದರ ಅಡಿಗಳ ನಿವೇಶನವು ಸಂಸ್ಥೆ / ಟ್ರಸ್ಟ್ ಅಧ್ಯಕ್ಷರ / ಕಾರ್ಯದರ್ಶಿಯವರ ಪದನಾಮದಲ್ಲಿ ನೋಂದಣಿಯಾಗಿದ್ದು, ಸದರಿ ನಿವೇಶನವು ಪ್ರಸ್ತುತ ಸಂಸ್ಥೆಯ / ಟ್ರಸ್ಟ್‌ನ ಸ್ವಾಧೀನಾನುಭವದಲ್ಲಿರಬೇಕು.
11. ಕಾಲೇಜಿನ ನಿವೇಶನ / ಜಮೀನು ಕೃಷಿ ಭೂಮಿಯಾಗಿದ್ದಲ್ಲಿ, ಕೃಷಿಯೇತರ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಭೂ ಪರಿವರ್ತನೆ ಮಾಡಿಸಿಕೊಂಡಿಬೇಕು.
12. ಕಾಲೇಜಿನ ಕಟ್ಟಡವನ್ನು ನಿರ್ಮಿಸಲು ಸಕ್ಷಮ ಪ್ರಾಧಿಕಾರದಿಂದ ನಿಯಮಾನುಸಾರ ಮಂಜೂರಾತಿ ಪಡೆದಿರಬೇಕು.
13. ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮಗಳನ್ವಯ ನಿಗದಿತ ವಿದ್ಯಾರ್ಹತೆ, ವಯೋಮಿತಿ ಮತ್ತು ಮೀಸಲಾತಿಗೆ ಅನುಗುಣವಾಗಿ ಪ್ರತಿಯೊಂದು ಬೋಧನಾ ವಿಷಯದಲ್ಲಿ ಖಾಯಂ ಉಪನ್ಯಾಸಕರನ್ನು ನೇಮಕಾತಿ ನಿಯಮಗಳನ್ವಯ ನೇಮಕ ಮಾಡಿಕೊಂಡಿರಬೇಕು.
14. ಪದವಿ ಪೂರ್ವ ಕಾಲೇಜುಗಳಲ್ಲಿನ ಶಾಶ್ವತ ಅನುದಾನ ರಹಿತ ಸಂಯೋಜನೆಗಳು / ವಿಭಾಗಗಳಿಗೆ ನೇಮಕಗೊಂಡಿರುವ ಪ್ರತಿ ಉಪನ್ಯಾಸಕರಿಗೆ / ಸಿಬ್ಬಂದಿಗೆ ಕನಿಷ್ಠ ವೇತನ ನೀಡುತ್ತಿರಬೇಕು.
15. ಮೀಸಲಾತಿ ನಿಯಮಗಳಿಗೆ ಅನುಗುಣವಾಗಿ ಕಾಲೇಜಿನಲ್ಲಿ ಪಿಯುಸಿ ದಾಖಲಾತಿಯಲ್ಲಿ ಮೀಸಲಾತಿ ನೀಡಿರಬೇಕು.
16. ಕಾಲೇಜು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಾಗಿದ್ದಲ್ಲಿ, ಸದರಿ ಅಲ್ಪಸಂಖ್ಯಾತ ಧಾರ್ಮಿಕ / ಭಾಷೆಗೆ ಸೇರಿದ ಶೇಕ2 25 ರಷ್ಟು ವಿದ್ಯಾರ್ಥಿಗಳಿಗೆ ಪಿಯುಸಿಯಲ್ಲಿ ದಾಖಲಾತಿ ನೀಡಿರಬೇಕು.
17. ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಪ್ರತಿ ಭಾಷೆ / ವಿಷಯ / ಸಂಯೋಜನೆ ವಿಭಾಗದಲ್ಲಿ ನಿಗದಿಪಡಿಸಿರುವ ಕನಿಷ್ಠ ಸಂಖ್ಯೆಯ ವಿದ್ಯಾರ್ಥಿಗಳ ದಾಖಲಾತಿ ಆಗಿರಬೇಕು.
18. ಶೈಕ್ಷಣಿಕ ಮಾನ್ಯತೆ ಮುಂದುವರಿಕೆ / ನವೀಕರಣಕ್ಕೆ ಸಂಬಂಧಿಸಿದಂತೆ ಆಡಳಿತ ಮಂಡಳಿ / ಪ್ರಿನ್ಸಿಪಾಲರು ನೀಡಿರುವ ಮಾಹಿತಿ / ದಾಖಲೆಗಳು ತಪ್ಪು / ಸುಳ್ಳು ಎಂದು ಕಂಡು ಬಂದು ಮಾನ್ಯತೆ ಮುಂದುವರಿಕೆಯನ್ನು / ನವೀಕರಣವನ್ನು ರದ್ದುಪಡಿಸಿದಲ್ಲಿ, ಅದಕ್ಕೆ ಆಡಳಿತ ಮಂಡಳಿ / ಪ್ರಿನ್ಸಿಪಾಲರೇ ಹೊಣೆಗಾರರು ಮತ್ತು ಜವಾಬ್ದಾರರಾಗುವರು.
19. ನಿಗದಿಪಡಿಸಿರುವ ಮಾನ್ಯತೆ ನವೀಕರಣ ಶುಲ್ಕದ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರಬೇಕು.
20. ಪದವಿ ಪೂರ್ವ ಶಿಕ್ಷಣ ನಿಯಮಗಳು 2006ರ ನಿಯಮಗಳನ್ವಯ ಪದವಿ ಪೂರ್ವ ಕಾಲೇಜಿನಲ್ಲಿ ನಿಗದಿಪಡಿಸಿರುವ ಅಳತೆಯ ನಿವೇಶನ, ಸುಸಜ್ಜಿತ ಕಟ್ಟಡ, ಆಟದ ಮೈದಾನ ಮುಂತಾದ ಅಗತ್ಯ ಮೂಲಭೂತ ಸೌಲಭ್ಯಗಳಿರಬೇಕು. ಒಂದು ವೇಳೆ ಮೂಲಭೂತ ಸೌಲಭ್ಯಗಳಲ್ಲಿ ಕೊರತೆ ಇದ್ದಲ್ಲಿ, ಕೊರತೆ ಇರುವ ಮೂಲಭೂತ ಸೌಲಭ್ಯಗಳನ್ನು ದಿನಾಂಕಃ 31.03.2017 ರ ಒಳಗಾಗಿ ಹೊಂದಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಕಾಲೇಜಿನ ಶೈಕ್ಷಣಿಕ ಮಾನ್ಯತೆಯನ್ನು ನಿರಾಕರಿಸಲಾಗುವುದು ಹಾಗೂ ವಿದ್ಯಾರ್ಥಿಗಳನ್ನು ಪ್ರಥಮ ಪಿಯುಸಿ ದಾಖಲು ಮಾಡಿಕೊಳ್ಳಲು ಅನುಮತಿ ನಿರಾಕರಿಲಾಗುವುದು.
21. ಶೈಕ್ಷಣಿಕ ಮಾನ್ಯತೆ ನೀಡಿರುವ ಭಾಷಾ ವಿಷಯಗಳು ಮತ್ತು ಸಂಯೋಜನೆಗಳು ಅಂತಿಮ ಪರಿಶೀಲನೆಗೆ ಒಳಪಟ್ಟಿರುತ್ತದೆ. ಇಲ್ಲಿ ನಮೂದಾಗಿರುವ ಮಾತ್ರಕ್ಕೆ ಇವುಗಳ ಮೇಲೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು
2. ಜಿಲ್ಲಾ ಉಪನಿರ್ದೇಶಕರುಗಳಿಗೆ.
3. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ/ಆಡಳಿತ ಮಂಡಳಿಗೆ – ಮಾನ್ಯತೆ ನವೀಕರಣ ಸಂಬಂಧ ಈ ಕಚೇರಿಗೆ ಅನಾವಶ್ಯಕವಾಗಿ ಭೇಟಿ ನೀಡದಿರಲು ತಿಳಿಸಿದೆ.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು – ಅಂತರ್ಜಾಲದಲ್ಲಿ ಅಳವಡಿಸಲು.
5. ಕಚೇರಿ ಪ್ರತಿ.

ಖಾಸಗಿ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಮಾನ್ಯತೆ ನವೀಕರಿಸುವ/ಮುಂದುವರೆಸಬಹುದಾದ ಕಾಲೇಜುಗಳ ಮಾಹಿತಿ ಪಟ್ಟಿ

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು, ವಿಳಾಸ ಮತ್ತು ಸಂಕೇತ ಸಂಖ್ಯೆ | ಕಾಲೇಜು ಮಂಜೂರಾದಆದೇಶ ಸಂಖ್ಯೆ ಮತ್ತು ಪ್ರಥಮ ಶೈಕ್ಷಣಿಕ ಮಾನ್ಯತೆ ನೀಡಿದಆದೇಶ ಸಂಖ್ಯೆ ಹಾಗೂ ಪ್ರಾರಂಭವಾದ ವರ್ಷ | ಕಾಲೇಜಿಗೆ, ಪ್ರಥಮವಾಗಿ ಮಂಜೂರಾದ ಭಾಷೆ/ ವಿಷಯಗಳು, ಸಂಯೋಜನೆಗಳು ಮತ್ತು ಸೆಕ್ಷನ್‌ಗಳು<br>ಪ್ರ.ಪಿಯುಸಿ –<br>ದ್ವಿ.ಪಿಯುಸಿ – | ಕಾಲೇಜಿಗೆಯಾವ ವರ್ಷದವರೆಗೆ ಮಾನ್ಯತೆ ನವೀಕರಿಸಲಾಗಿದೆ ಮತ್ತುಯಾವಯಾವ ಭಾಷೆ/ ವಿಷಯಗಳು, ಸಂಯೋಜನೆಗಳು ಮತ್ತುಎಷ್ಟು ಸೆಕ್ಷನ್‌ಗಳಿಗೆ ನವೀಕರಿಸಲಾಗಿದೆ? | ಪ್ರಥಮಶೈಕ್ಷಣಿಕಮಾನ್ಯತೆ ನೀಡಿದ/ನವೀಕರಿಸಿದ ನಂತರ ಮಂಜೂರು ಮಾಡಿರುವ ಭಾಷೆ/ ವಿಷಯಗಳು, ಸಂಯೋಜನೆಗಳು ಮತ್ತು ಸೆಕ್ಷನ್‌ಗಳು | ವ್ಯತ್ಯಾಸ ಇಲಾಖೆಯಅನುಮತಿಇಲ್ಲದೆ ಪ್ರಾರಂಭಿಸಿರುವ ಭಾಷೆ/ವಿಷಯ/ ಸೆಕ್ಷನ್‌ಗಳು | ಮಂಜೂರಾಗಿ ಈಗ ಚಾಲನೆಯಲ್ಲಿಇಲ್ಲದಿರುವುದರಿಂದ ಮಾನ್ಯತೆ ನವೀಕರಣದಿಂದ ಕೈ ಬಿಡಬಹುದಾದ ಭಾಷೆ/ ಸಂಯೋಜನೆಗಳು/ಸೆಕ್ಷನ್ ಗಳು | ಈಗ ಮಾನ್ಯತೆ ನವೀಕರಿಸಬೇಕಾದ ಭಾಷೆ/ ಸಂಯೋಜನೆಗಳು / ಸೆಕ್ಷನ್‌ಗಳಿಗೆಮತ್ತು ಮಾನ್ಯತೆಯನ್ನುಯಾವ ವರ್ಷದಿಂದನವೀಕರಿಸ ಬೇಕಾಗಿದೆ | ಮಾನ್ಯತೆ ನವೀಕರಣ ಶುಲ್ಕ ಪಾವತಿಸಿದ್ದಾರೆಂಮೇ? ಹೌದು/ಇಲ್ಲ ಪಾವತಿಸಿದ್ದರೆ ಒಟ್ಟು ಶುಲ್ಕ | 25,000 ಚ.ಅ. ನಿವೇಶನ ಹೊಂದಿದೆಯೇ/ಇಲ್ಲವೇ? ಹೊಂದಿದ್ದಲ್ಲಿ ಸ್ವಂತ/ಲೀಸ್‌ಗೆ ಪಡೆಯಲಾಗಿದೆಯೇ? | ಕೊಠಡಿಗಳು/ ಪ್ರಯೋಗಾಲಂಪು ಕೊಠಡಿಗಳು ನಿಗದಿತ ಅಳತೆ ಹೊಂದಿವೆ/ಇಲ್ಲ | ಆಟದ ಮೈದಾನಇದೆ/ಇಲ್ಲ | ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಬಗ್ಗೆ ಮತ್ತು ದಿನಾಂಕ 31–03–2017 ರೊಳಗಾಗಿ ಒದಗಿಸಿಕೊಳ್ಳುವುದಾಗಿರೂ 200 ಛಾಪಾಕಾಗದದಲ್ಲಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆಯೇ? | ಷರಾ |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 1. | ಎಸ್‌ಎಸ್004<br>ಸಂತ ಅಲೋಶಿಯಸ್ ಸಂಧ್ಯಾ ಪದವಿ ಪೂರ್ವ ಕಾಲೇಜು, ಕೊಡಿಯಾಲ್‌ಬೈಲ್ ದ.ಕ. ಮಂಗಳೂರು | ಇಡಿ 37 ಯುಎಸಿ 68 ದಿನಾಂಕ:12–06–1968 | 01,02,03<br>21,22,28,29<br>21,22,27,30 | 2010–11ರವರೆಗೆ<br>01,02,03<br>21,22,28,29<br>21,22,27,30 | – | ಯಾವುದು ಇಲ್ಲ– | ಯಾವುದು ಇಲ್ಲ– | 2011–12/<br>2016–17<br>01,02,03<br>21,22,28,29<br>21,22,27,30 | 1,49,500/ ಪಾವತಿಸಿರುತ್ತಾರೆ | ಸ್ವಂತದ್ದು ಆರ್.ಟಿ.ಸಿ ಲಗತ್ತಿಸಿರುತ್ತಾರೆ. | ಕೊಠಡಿಗಳು ಇರುತ್ತವೆ ಎಂದು ತಿಳಿಸಿರುತ್ತಾರೆ. | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ. | ದಾಖಲಾತಿ ಹೆಚ್ಚಿಸುವ ಷರತ್ತು ವಿಧಿಸಿ ನವೀಕರಿಸಬಹುದು. |
| 2. | ಎಸ್‌ಎಸ್119<br>ಟಿಪ್ಪು ಸುಲ್ತಾನ ಪದವಿ ಪೂರ್ವ ಕಾಲೇಜು, ಓಂಭತ್ತುಕೆರೆ ಉಲ್ಲಾಳ ಮಂಗಳೂರು ದ.ಕ. | ಇಡಿ 115 ಎಸ್ ಹೆಚ್‌ಹೆಚ್ 92, ಬೆಂಗಳೂರು ದಿನಾಂಕ:11–08–1992<br>ಪಪೂಶಿಇ:ಮಾನ್ಯತೆ ವಿನಿಪು 3/1992–93 ದಿನಾಂಕ:19–03–1993 | 01,02,<br>33,34,35,36 | 2010–11ರವರೆಗೆ<br>01,02,03<br>21,22,27,30<br>33,34,35,36<br>33,34,35,41<br>21,22,28,29 | 03,<br>33,34,35,41<br>21,22,27,30<br>27,3031,41<br>21,22,28,29 | ಯಾವುದು ಇಲ್ಲ– | 27,3031,41 | 2011–12<br>2016–17<br>01,02,03<br>33,34,35,36<br>33,34,35,41<br>21,22,27,30 | ಪಾವತಿಸಿರುತ್ತಾರೆ | ಸ್ವಂತದ್ದು ತಿಳಿಸಿ ದಾಖಲೆ ಲಗತ್ತಿಸಿರುತ್ತಾರೆ | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ | ಕಲಾ ವಿಭಾಗದಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕಡಿಮೆ ಇರುತ್ತದೆ. ಕಾರಣ ರದ್ದುಪಡಿಸಿ ಮನ್ಯತೆ ನವೀಕರಿಸಬಹುದಾಗಿದೆ. |
| 3. | ಎಸ್‌ಎಸ್120<br>ಶ್ರೀ ರಾಮಕೃಷ್ಣ ಪದವಿ ಪೂರ್ವ ಕಾಲೇಜು, ಎಸ್.ಆರ್.ಎಸ್.ಹೋಮ್ ಆವರಣ ಬಂಟ್ಸ್ ಹಾಸ್ಟೆಲ್ ಸರ್ಕಲ್ ಮಂಗಳೂರು ದ. 575003 | ಇಡಿ 617/ ಎಸ್ ಹೆಚ್‌ಹೆಚ್ 91, ಬೆಂಗಳೂರು ದಿನಾಂಕ:04–11–1991<br>ಪಪೂಶಿಇ:ಮಾಶ/ವಿನಿಪು 3/1993 ದಿನಾಂಕ:05–01–1994 | 01,02,03<br>33,34,35,36<br>35,30,31,27 | 2010–11ರವರೆಗೆ<br>01,02,03<br>33,34,35,36<br>22,27,30,31<br>22,27,30,41<br>33,34,35,41 | 22,27,30,31<br>33,34,35,31<br>22,27,30,41<br>21,22,28,29<br>ದಾಖಲೆ ಸಲ್ಲಿಸಿರುವುದಿಲ್ಲ | ಯಾವುದು ಇಲ್ಲ | 21,22,28,29 | 2011–12<br>2016–17<br>01,02,03<br>22,27,30,31<br>22,27,30,41<br>33,34,35,36<br>33,34,35,41 | ಪಾವತಿಸಿರುತ್ತಾರೆ | 46,583.52ಚ.ಅ. ಸ್ವಂತದ್ದು ಎಂದು ತಿಳಿಸಿರುತ್ತಾರೆ.ಆದರೆ ದಾಖಲೆ ಸಲ್ಲಿಸಿರುವುದಿಲ್ಲ | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುವುದಿಲ್ಲ. | ಷರತ್ತು ವಿಧಿಸಿ ನವೀಕರಣ ಮಾಡಬಹುದು |

Roopa
ರೂಪ. ಎನ್.ಬಿ.
ದ್ವಿತೀಯ ದರ್ಜೆ ಸಹಾಯಕರು

ಜೆ. ಎನ್. ವಿರೂಪಾಕ್ಷಪ್ಪ
ಅಧೀಕ್ಷಕರು

ಜಗಜೀವನ್‌ದಾಸ್ ಭಂಡಾರಿ .ಪಿ
ಉಪನಿರ್ದೇಶಕರು

| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | |
|---|---|---|---|---|---|---|---|---|---|---|---|---|---|---|
| 4. | ಎಸ್ಎಸ್145 ಸೈಂಟ್ ಆನ್ಸ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಪಾಂಡೇಶ್ವರ ಮಂಗಳೂರು ದ.ಕ. ಜಿಲ್ಲೆ | ಇಡಿ 483 ಎಸ್ ಹೆಚ್ಹೆಚ್ 96, ಬೆಂಗಳೂರು ದಿನಾಂಕ:20–06–1997 ಜಿ.ಎ.ಮಾ.ಶಾ ವಿನಿಸು/30/1997–98 ದಿನಾಂಕ:08–09–1997 | 01,02,03<br>21,22,27,30<br>33,34,35,36 | 2010–11ರವರೆಗೆ<br>01,02,03<br>21,22,27,30<br>33,34,35,36<br>21,22,28,29<br>33,34,35,41 | 21,22,28,29<br>33,34,35,41<br>31,33,34,35<br>22,27,30,31<br>22,27,30,41 | ಯಾವುದು ಇಲ್ಲ– | 31,33,34,35 | 2011–12 ರಿಂದ 2016–17<br>01,02,03<br>33,34,35,36<br>33,34,35,41<br>21,22,27,30<br>22,27,30,41<br>22,27,30,31<br>21,22,28,29 | ರೂ.48,000/– ಪಾತಿಸಿದ್ದಾರೆ. ಬಾಕಿ 18,000/– ಪಾವತಿಸಬೇಕಾಗಿ ರುತ್ತದೆ. | ಕನ್ಯಾಮಠಕ್ಕೆ ಸೇರಿರುತ್ತದೆ ಎಂದು ತಿಳಿಸಿರುತ್ತಾರೆ ಆದರೆ ಆದರೆ ದಾಖಲೆ ಸಲ್ಲಿಸಿರುವುದಿಲ್ಲ. | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ | 31,33,34,35, ರ ಸಂಯೋಜನೆಯಲ್ಲಿ ಕಳೆದ ಮೂರು ವರ್ಷಗಳಿಂದ ದಾಖಲಾತಿ ಕಂಡುಬರುವುದಿಲ್ಲ. ಸದರಿ ಸಂಯೋಜನೆಯನ್ನು ರದ್ದುಪಡಿಸಬಹುದಾಗಿದೆ. ಈ ಷರತ್ತಿನಂತೆ ನವೀಕರಣ ಮಾಡಬಹುದು |
| 5. | ಎಸ್ಎಸ್147 ಶಾರದಾ ಪದವಿ ಪೂರ್ವ ಕಾಲೇಜು, ಕೊಡಿಯಾಲ್ ಬೈಲ್ ಮಂಗಳೂರು ದ.ಕ. ಜಿಲ್ಲೆ | ಇಡಿ 252 ಎಸ್ ಹೆಚ್ಹೆಚ್ 97, ಬೆಂಗಳೂರು ದಿನಾಂಕ:30–03–1998 ಪಪೂಶಿ/ಸಿ–3/ಮಾನ್ಯತೆ–4/ಶೈಮಾನ45/1998–1999 ದಿನಾಂಕ:08–07–1998 | 01,03,09<br>33,34,35,36<br>33,34,35,41 | 2010–11ರವರೆಗೆ<br>01,02,03,09<br>33,34,35,36<br>33,34,35,41<br>27,30,31,41<br>33,34,35,40<br>33,34,35,31 | 27,30,31,41<br>31,33,34,35,<br>33,34,35,40<br>27,30,31,75<br>22,27,30,31 | ಯಾವುದು ಇಲ್ಲ | ಯಾವುದು ಇಲ್ಲ– | 2011–12 ರಿಂದ 2016–17<br>01,03,09<br>27,30,31,41<br>27,30,31,75<br>31,33,34,35<br>33,34,35,36<br>33,34,35,40<br>33,34,35,41 | ಪಾವತಿಸಿರುತ್ತಾರೆ | ಸ್ವಂತದ್ದು ,1.32 ಸೇಂಟ್ಸ್ ಇರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ದಾಖಲೆ ಸಲ್ಲಿಸಿರುವುದಿಲ್ಲ. | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ. | 33,34,35,36 ಸಂಯೋಜನೆಗೆ ವಿದ್ಯಾರ್ಥಿಗಳಿಲ್ಲ ಇದನ್ನು ರದ್ದುಪಡಿಸುವ ಷರತ್ತಿಗೊಳಪಡಿಸಿ ನವೀಕರಿಸಬಹುದಾಗಿದೆ– |
| 6. | ಎಸ್ಎಸ್148 ಶ್ರೀ ಕೃಷ್ಣ ಪದವಿ ಪೂರ್ವ ಕಾಲೇಜು, ಪಟ್ಟೆ, ಬಡಗನ್ನೂರು ಪುತ್ತೂರು ತಾಲೂಕು ದ .ಕ. ಜಿಲ್ಲೆ 574223 | ಇಡಿ 102 ಎಸ್ ಹೆಚ್ಹೆಚ್ 97, ಬೆಂಗಳೂರು ದಿನಾಂಕ:22–10–1997 ಜಿ.ಎ.ಮಾಶಾ.ವಿನಿಮ/3,98–99 ದಿನಾಂಕ:03–11–1998 | 01,02<br>21,22,28,29<br>33,34,35,36 | 2010–11ರವರೆಗೆ<br>01,02<br>21,22,28,29<br>33,34,35,36 | 21,22,27,30 | ಯಾವುದು ಇಲ್ಲ– | ಯಾವುದು ಇಲ್ಲ– | 2011–12 ರಿಂದ 2016–17<br>01,02<br>21,22,28,29<br>33,34,35,36<br>21,22,27,30 | ಪಾವತಿಸಿರುತ್ತಾರೆ | ಸ್ವಂತದ್ದು ,0.15 ಎಕರೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ ದಾಖಲೆ ಸಲ್ಲಿಸಿರುವುದಿಲ್ಲ. | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ. | ವಿಜ್ಞಾನ ವಿಭಾಗ ರದ್ದುಪಡಿಸುವ ಷರತ್ತು ವಿಧಿಸಿ ನವೀಕರಿಸಬಹುದು |
| 7. | ಎಸ್ಎಸ್154 ಲೇಡಿಹಿಲ್ ವಿಕ್ಟೋರಿಯಾ ಬಾಲಿಕಾ ಸಂಯುಕ್ತ ಪದವಿ ಪೂರ್ವ ಕಾಲೇಜು, ಉರ್ವ, ಮಂಗಳೂರು ದ.ಕ. | ಇಡಿ 70 ಎಸ್ ಹೆಚ್ಹೆಚ್ 99 ಬೆಂಗಳೂರು ದಿನಾಂಕ:08–03–1999 ಜಿ.ಎ.ಮಾ.ಶಾ ವಿನಿಮ/ಎಸ್ಎಸ್/04/98–99 ದಿನಾಂಕ:11–06–1999 | 01,02,03<br>21,22,27,30<br>21,22,28,29 | 2006–07ರಿಂದ 2010–11ರವರೆಗೆ ನವೀಕರಣಗೊಂಡ ಭಾಷೆ ಮತ್ತು ಸಂಯೋಜನೆಗಳು<br>01,02,03<br>21,22,27,30<br>21,22,28,29<br>22,27,30,31<br>33,34,35,36 | ಯಾವುದು ಇಲ್ಲ | ಯಾವುದು ಇಲ್ಲ– | ಯಾವುದು ಇಲ್ಲ | 2011–12ರಿಂದ 2016–17 | 81,500/– | 209248 ಚ.ಅ. ಕಾಲೇಜು ಆಡಳಿತ ಮಂಡಳಿಗೆ ಸೇರಿದ ಕಟ್ಟಡ ವೆಂದು ತಿಳಿಸಿರುತ್ತಾರೆ. ಆದರೆ ದಾಖಲೆ ಸಲ್ಲಿಸಿರುವುದಿಲ್ಲ. | ಇರುವುದಾಗಿ ತಿಳಿಸಿದ್ದಾರೆ | ಇರುವುದಾಗಿ ತಿಳಿಸಿದ್ದಾರೆ | ಸಲ್ಲಿಸಿರುತ್ತಾರೆ. | ಷರತ್ತು ವಿಧಿಸಿ ನವೀಕರಿಸಬಹುದು |

Roopa
ರೂಪ. ಎನ್.ಬಿ.
...ೀಯ ದರ್ಜೆ ಸಹಾಯಕರು

J.N. [illegible]
ಜೆ. ಎನ್. [illegible]
ಅಧೀಕ್ಷಕರು